**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ**

**ಸಿ.ಸಿ ಸಂಖ್ಯೆ ಃ 447/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ | ರಾಘವೇಂದ್ರ ಡಿ ಶೆಟ್ಟಿ | **P.W -02** |
| **ತಂದೆಯ ಹೆಸರು** | ಃ | ಭೋಜ ಶೆಟ್ಟಿ | **C.W -05** |
| **ವಯಸ್ಸು** | ಃ | 43 ವರ್ಷ | |
| **ಉದ್ಯೋಗ** | ಃ | ವ್ಯಾಪಾರಿ | |
| **ವಾಸಸ್ಥಳ** | ಃ | ಕಲ್ಕಟ್ಟೆ, ಶೃಂಗೇರಿ. | |

**ದಿನಾಂಕಃ29-08-2024 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಃಃ ಮುಖ್ಯ ವಿಚಾರಣೆ ಃ ಮಾನ್ಯ ಎ.ಪಿ.ಪಿ. ಯವರಿಂದ ಃಃ**

1. ನನಗೆ 1 ರಿಂದ 4 ಆರೋಪಿಗಳು ಗೊತ್ತು. ನನಗೆ ಚಾಸಾ-6 ರಿಂದ ಚಾಸಾ-8 ರವರು ಸಹ ಗೊತ್ತು. ದಿನಾಂಕ 29-02-2020 ರಂದು ಸಂಜೆ 5.00 ಗಂಟೆಯ ಸಮಯಕ್ಕೆ ಶೃಂಗೇರಿ ಕಾಂಚೀನಗರದ ಬಳಿ ಇರುವ ಕಾಂಚೀ ಗುಡ್ಡೇ ಗಣಪತಿ ಹತ್ತಿರ ನಾನು ಶ್ರಮಾದಾನ ಮಾಡುತ್ತಿದ್ದಾಗ ನನ್ನ ಜೊತೆ ಚಾಸಾ-6 ರಿಂದ ಚಾಸಾ-8 ರವರು ಇದ್ದು, ಆ ಸಮಯದಲ್ಲಿ ಅರಣ್ಯಾಧಿಕಾರಿಗಳಾದ ಚಾಸಾ-1 ಹಾಗೂ ಅವರ ಸಿಬ್ಬಂದಿಗಳಾದ ಚಾಸಾ-2 ರಿಂದ ಚಾಸಾ-4 ರವರು ನಮ್ಮ ಬಳಿ ಬಂದು, ಹತ್ತಿರದಲ್ಲಿಯೇ ವಾಸವಿದ್ದ 1 ನೇ ಆರೋಪಿಯ ಮನೆಯಲ್ಲಿ ಶ್ರೀಗಂಧದ ತುಂಡು ಇರುವುದಾಗಿ ಅವರ ಬಳಿ ಮಾಹಿತಿ ಇದ್ದು, ಅದನ್ನು ಅಮಾನತು ಪಡಿಸಿಕೊಳ್ಳಲು ಅವರು ನಡೆಸುವ ದಾಳಿಗೆ ನಮ್ಮನ್ನು ಸಹಕರಿಸಲು ಕೇಳಿದ ಮೇರೆಗೆ ನಾವು ಅಂದರೆ ನಾನು, ಚಾಸಾ-6 ರಿಂದ ಚಾಸಾ-8 ರವರು ಒಪ್ಪಿ ಅವರ ಜೊತೆ 1 ನೇ ಆರೋಪಿಯ ಮನೆಯ ಹತ್ತಿರ ಹೋಗಿರುತ್ತೇವೆ.

2. ನಂತರ 1 ನೇ ಆರೋಪಿಯ ಮನೆಯ ಬಳಿ ಹೋಗಿ ನಾವು ತಲುಪಿದಾಗ ಅರಣ್ಯಾಧಿಕಾರಿಗಳು 1 ನೇ ಆರೋಪಿಯ ಮನೆಯನ್ನು ಪರಿಶೀಲಿಸಲು ಅವರಿಗೆ ತಿಳಿಸಿದ್ದು, ಅವರು ಒಪ್ಪಿದ ನಂತರ ಅರಣ್ಯಾಧಿಕಾರಿಗಳ ಜೊತೆ ನಾವೆಲ್ಲರೂ ಆ ಮನೆಯ ಒಳಗೆ ಹೋಗಿ ಮನೆಯಲ್ಲಿದ್ದ ಒಂದು ಕೋಣೆಯ ಒಳಗೆ ನಾಲ್ಕು ಮರದ ಸಣ್ಣ ತುಂಡುಗಳು ಇದ್ದು, ಸದರಿ ಮರದ ತುಂಡುಗಳನ್ನು ಅರಣ್ಯಾಧಿಕಾರಿಗಳು ಶ್ರೀಗಂಧದ ಮರದ ತುಂಡುಗಳು ಎಂದು ಖಾತ್ರಿ ಪಡಿಸಿಕೊಂಡಿರುತ್ತಾರೆ.

3. ನಂತರ ಅದೇ ಕೋಣೆಯಲ್ಲಿ ಒಂದು ಮಂಚದ ಅಡಿಯಲ್ಲಿ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಇದ್ದು, ಅದನ್ನು ಅರಣ್ಯಾಧಿಕಾರಿಗಳಾದ ಚಾಸಾ-1 ರವರು ನಮ್ಮಗಳ ಸಮಕ್ಷಮ ತೆರೆದು ನೋಡಿದ್ದು, 1.Apex ಎಂದು ಬರೆದಿರುವ ಕಪ್ಪು ಬಣ್ಣದ Air gun, 2. Blanca ಎಂದು ಬರೆದಿರುವ ಕಪ್ಪು ಬಣ್ಣದ Air ಪಿಸ್ತೂಲ್, 3. ಎರಡು ಪಿಸ್ತೂಲ್ pellet, 4.30 Fiber items , 5. Air rifle pellets (5 ಸಂಖ್ಯೆ), 6. Electronic detonator (2 ಸಂಖ್ಯೆ) with frame (7 ಸಂಖ್ಯೆ ) 7. Blasting connecting wire, 8. Gun powder 50 grams, 9. Gun cleaning oil ಮತ್ತು 10. Gelatin Explosive tube (3 ಸಂಖ್ಯೆ) ಇದ್ದದ್ದು ಕಂಡು ಬಂದಿರುತ್ತದೆ.

4. ನಂತರ ಅಲ್ಲಿದ್ದ 4 ಶ್ರೀಂಗಂಧದ ತುಂಡುಗಳಿಗೆ ಕೆಂಪು ಬಣ್ಣದಿಂದ 1 ರಿಂದ 4 ಎಂದು ಕ್ರಮ ಸಂಖ್ಯೆಯನ್ನು ಅರಣ್ಯಾಧಿಕಾರಿಗಳಾದ ಚಾಸಾ-1 ರವರು ಬರೆದು, ಅದರ ತೂಕವನ್ನು ಮಾಡಿದ್ದು, ಅದು 915 ಗ್ರಾಂ ಇಂದ ಕೂಡಿತ್ತು. ಅಲ್ಲಿ ಸಿಕ್ಕ ಎಲ್ಲಾ ವಸ್ತುಗಳನ್ನು ಅರಣ್ಯಾಧಿಕಾರಿಗಳು ನಮ್ಮ ಸಮಕ್ಷಮ ಅಮಾನತು ಪಡಿಸಿಕೊಂಡಿರುತ್ತಾರೆ. ಸದರಿ ಸಮಯದಲ್ಲಿ ಒಂದು ಮಹಜರ್ ಅನ್ನು ಸಂಜೆ 5 ರಿಂದ 6 ಗಂಟೆಯ ಮಧ್ಯದಲ್ಲಿ ನಮ್ಮ ಸಮಕ್ಷಮ 1ನೇ ಆರೋಪಿಯ ಮನೆಯಲ್ಲಿ ತಯಾರಿಸಿ ನಮ್ಮ ಸಹಿಗಳನ್ನು ಅದರ ಮೇಲೆ ಪಡೆದಿರುತ್ತಾರೆ.

5. ನಂತರ ನನಗೆ ಅರಣ್ಯಾಧಿಕಾರಿಗಳಿಂದ ಈ ವಿಷಯವನ್ನು ಅವರು ಶೃಂಗೇರಿ ಪೋಲೀಸರಿಗೆ ತಿಳಿಸಿ ವರದಿ ನೀಡಿದ್ದು, ಅದರ ಅನ್ವಯ ಪ್ರ.ವ ವರದಿಯನ್ನು ದಾಖಲಾಗಿರುತ್ತದೆ ಎಂದು ತಿಳಿದು ಬಂದಿರುತ್ತದೆ. ಈ ಎಲ್ಲಾ ವಿಷಯಗಳ ಬಗ್ಗೆ ನಂತರದಲ್ಲಿ ನನ್ನನ್ನು ಶೃಂಗೇರಿ ಪೋಲೀಸರು ವಿಚಾರಿಸಿದ್ದು, ಅವರಿಗೆ ನಾನು ದಿನಾಂಕ 15-06-2022 ರಂದು ಹೇಳಿಕೆಯನ್ನು ನೀಡಿರುತ್ತೇನೆ.

6. ಆ ದಿನ ನನ್ನ ಸಮಕ್ಷಮ ಮಾಡಿದ ಮಹಜರ್ ಅನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ನಿಪಿ-1 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ -1(ಬಿ) ಎಂದು ಗುರುತಿಸಲಾಯಿತು. ಸದರಿ ಮಹಜರ್ ಗೆ ನನ್ನ ಜೊತೆ ಚಾಸಾ-1, ಚಾಸಾ-2 ಮತ್ತು ಚಾಸಾ-4 ರಿಂದ ಚಾಸಾ-8 ರವರು ಸಹಿ ಮಾಡಿರುತ್ತಾರೆ.

7. ನನ್ನ ಸಮಕ್ಷಮ ಆ ದಿನ ಅಮಾನತು ಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ-1 ರಿಂದ 10 ಮು.ಮಾಲುಗಳನ್ನು ನೋಡಿ ಗುರುತಿಸಿರುತ್ತಾರೆ.

8. ನಾನು ಪ್ರಕರಣದ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ಮತ್ತು 3ನೇ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. 2 ಮತ್ತು 4ನೇ

ಆರೋಪಿಗಳು ಗೈರು ಹಾಜರು ಇರುವ ಕಾರಣ ಅವರ ಗುರುತಿಸುವಿಕೆಯಲ್ಲಿ ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಲಾಯಿತು.

**ಃಪಾಟೀ ಸವಾಲುಃ 1 ರಿಂದ 4 ನೇ ಆರೋಪಿಗಳ ಪರ ಶ್ರೀ. ಹೆಚ್ ಆರ್ ಯು ವಕೀಲರಿಂದ ಃ**

1. ನಾನು ಹೇಳುತ್ತಿರುವ ದಾಳಿಯ ದಿನ 1 ರಿಂದ 4 ನೇ ಆರೋಪಿಗಳು ನಾನು ಹೇಳುವ ಘಟನಾ ಸ್ಥಳದಲ್ಲಿ ಇರಲಿಲ್ಲ. 3 ಮತ್ತು 4 ನೇ ಆರೋಪಿಗಳ ಪರಿಚಯ ನನಗೆ ಇರುವುದಿಲ್ಲ. ಅವರಿಬ್ಬರನ್ನು ಈ ಹಿಂದೆ ನಾನು ಯಾವತ್ತೂ ಸಹ ನೋಡಿರುವುದಿಲ್ಲ. ನಾನು ಮತ್ತು ಚಾಸಾ-6 ರಿಂದ ಚಾಸಾ-8 ರವರು ಶೃಂಗೇರಿಯ ಬಜರಂಗದಳಾ, ವಿ.ಹೆಚ್.ಪಿ ಹಾಗೂ ಬಿ.ಜೆ.ಪಿ ರಾಜಕೀಯ ಪಕ್ಷದಲ್ಲಿ ಗುರುತಿಸಿಕೊಂಡ ವ್ಯಕ್ತಿಗಳಾಗಿರುತ್ತೇವೆ ಎಂದರೆ ಸರಿ. 1 ನೇ ಆರೋಪಿ ಸಹ ಹಿಂದೆ ಮೇಲೆ ಹೇಳಿದ ಸಂಘಟನೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ವ್ಯಕ್ತಿ ಆಗಿದ್ದರು ಎಂದರೆ ಸರಿ. ಅದೇ ರೀತಿ ಈ ಹಿಂದೆ ಚಾಸಾ-7 ರವರು ಮತ್ತು 1 ನೇ ಆರೋಪಿ ಶೃಂಗೇರಿಯ ಆರ್.ಎಸ್.ಎಸ್ ಬಣದಲ್ಲಿ ಗುರುತಿಸಿಕೊಂಡಿದ್ದರು ಎಂದರೆ ಸರಿ.

2. ನಾನು ಹೇಳುತ್ತಿರುವ ದಾಳಿಯ ದಿನಾಂಕವಾದ 29-02-2020 ರ ಪೂರ್ವದಲ್ಲಿ ಚಾಸಾ-7 ರವರಿಗೂ ಮತ್ತು 1 ನೇ ಆರೋಪಿಗೂ ಮನಸ್ತಾಪ ಆಗಿ 1 ನೇ ಆರೋಪಿ ಕಾಂಗ್ರೆಸ್ ರಾಜಕೀಯ ಪಕ್ಷವನ್ನು ಸೇರಿರುತ್ತಾರೆ ಎಂದರೆ ಸಾಕ್ಷಿಯು ಅವರು ಕಾಂಗ್ರೆಸ್ ಪಕ್ಷವನ್ನು ಸೇರಿರುವುದು ಗೊತ್ತಿದೆ, ಆದರೆ ಮನಸ್ತಾಪ ಆಗಿರುವ ವಿಚಾರ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚಾಸಾ-7 ರವರು ಮೇಲೆ ಕಾಣಿಸಿದ ಎಲ್ಲಾ ಬಿ.ಜೆ.ಪಿಯ ಅಂಗ ಸಂಸ್ಥೆಗಳಿಗೆ ನಮ್ಮೆಲ್ಲರಾ ಮುಖಂಡರಾಗಿರುತ್ತಾರೆ ಎಂದರೆ ಸಾಕ್ಷಿಯು ಚಾಸಾ-7 ರವರು ಬಜರಂಗದಳಾ ಹಾಗೂ ವಿ.ಹೆಚ್.ಪಿಯ ಮುಖಂಡರಾಗಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮತ್ತು ಚಾಸಾ-6 ಮತ್ತು ಚಾಸಾ-8 ರವರು ಚಾಸಾ-7 ರವರ ಹಿಂಬಾಲಕರಾಗಿರುತ್ತೇವೆ ಎಂದರೆ ಸರಿ.

3. ನಾನು ಹೇಳುತ್ತಿರುವ ದಿನಾಂಕ 29-02-2020 ರ ಶ್ರಮದಾನದ ಮುಂದಾಳತ್ವವನ್ನು ಚಾಸಾ-8 ರವರು ವಹಿಸಿದ್ದರು. ನಾನು ಹೇಳುತ್ತಿರುವ ಕಂಚೀಗುಡ್ಡ ಗಣಪತಿ ದೇವಸ್ಥಾನವು ಕಾಂಚೀನಗರದ ನಿವಾಸಿಗಳು ಪೂಜಿಸುವ ಮುಖ್ಯ ದೇವಸ್ಥಾನ ಆಗಿರುತ್ತದೆ ಎಂದರೆ ಸರಿ. ನನ್ನ ವಾಸದ ಮನೆ ಆ ಸ್ಥಳದಿಂದ 3-4 ಕಿ.ಮೀ ದೂರದಲ್ಲಿರುತ್ತದೆ ಎಂದರೆ ಸರಿ. 1 ನೇ ಆರೋಪಿಯ ಮನೆಯ ಅಕ್ಕ-ಪಕ್ಕ ಹಲವಾರು ವಾಸದ ಮನೆಗಳು ಇರುತ್ತವೆ ಎಂದರೆ ಸರಿ. ಅದೇ ರೀತಿ ಶೃಂಗೇರಿಯ ಆರ್.ಎಫ್.ಒ ಕಛೇರಿಯ ಅಕ್ಕ-ಪಕ್ಕ ಹಲವಾರು ವಾಸದ ಮನೆಗಳು ಇರುತ್ತವೆ ಎಂದರೆ ಸರಿ. ಶೃಂಗೇರಿಯ ಆರ್.ಎಫ್.ಒ ಕಛೇರಿ ಇಂದ ಕಂಚೀಗುಡ್ಡ ಗಣಪತಿ ದೇವಸ್ಥಾನವು ಸುಮಾರು 1 ಕಿ. ಮೀ ದೂರದಲ್ಲಿದೆ ಎಂದರೆ ಸರಿ. ಶೃಂಗೇರಿಯ ಆರ್.ಎಫ್.ಒ ಕಛೇರಿಯ ಕಂಚೀಗುಡ್ಡ ಗಣಪತಿ ದೇವಸ್ಥಾನದ ನಡುವೆ ನೂರಾರು ವಾಸದ ಮನೆಗಳು ಇರುತ್ತವೆ ಎಂದರೆ ಸರಿ.

4. ಚಾಸಾ-1 ರವರಿಗೆ ನಾವು ಆ ದಿನ ಕಾಂಚೀ ನಗರದ ಕಂಚೀಗುಡ್ಡ ಗಣಪತಿ ದೇವಸ್ಥಾನದಲ್ಲಿ ಇರುವ ವಿಚಾರ ಹೇಗೆ ತಿಳಿದು ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಚಾಸಾ-1 ರವರು ಆ ದಿನ ಅವರ ಇಲಾಖಾ ವಾಹನದಲ್ಲಿ ಚಾಸಾ-2 ರಿಂದ ಚಾಸಾ-4 ರವರ ಜೊತೆ ನಾವುಗಳು ಇದ್ದ ಸ್ಥಳಕ್ಕೆ ಸಂಜೆ 5.00 ಗಂಟೆ ಸುಮಾರಿಗೆ ಬಂದಿರುತ್ತಾರೆ. ನಾನು ಹೇಳುತ್ತಿರುವ ದಿನದಂದು ನನ್ನ ಬಳಿ ಹಾಗೂ ಚಾಸಾ-6 ರಿಂದ ಚಾಸಾ-8 ರವರ ಬಳಿ ಪೋಟೋ ತೆಗೆಯಬಲ್ಲ ಮೊಬೈಲ್ ಗಳು ಇದ್ದವು ಎಂದರೆ ಸರಿ. ಅದೇ ರೀತಿ ಚಾಸಾ-1 ರಿಂದ ಚಾಸಾ-4 ರವರ ಬಳಿ ಪೋಟೋ ತೆಗೆಯಬಲ್ಲ ಮೊಬೈಲ್ ಗಳು ಇದ್ದವು ಎಂದರೆ ಸರಿ.

5. ನಾನು ಹೇಳುವಂತೆ 1 ನೇ ಆರೋಪಿಯ ಮನೆಯ ಬಳಿ ಹೋದಾಗ ಆ ಮನೆಯಲ್ಲಿ ಒಂದು ಅಜ್ಜಿ ಇದ್ದರು. ಆ ಅಜ್ಜಿಯ ಕುಟುಂಬದವರ ಬಗ್ಗೆ ಚಾಸಾ-1 ರವರು ಮತ್ತು ಅವರ ಸಿಬ್ಬಂದಿಗಳು ನಮ್ಮ ಸಮಕ್ಷಮ ವಿಚಾರಿಸಿರುವುದಿಲ್ಲ. ನಾನು ಹೇಳುತ್ತಿರುವ ದಾಳಿಯ ದಿನ 1 ನೇ ಆರೋಪಿಯ ಮನೆಯ ಅಕ್ಕ-ಪಕ್ಕದ ಮನೆಯವರು ಸ್ಥಳದಲ್ಲಿ ಸೇರಿದ್ದರು, ಆದರೆ ಅವರು ಯಾರೂ ಸಹ ಮನೆಯ ಒಳಗೆ ಬಂದಿರುವುದಿಲ್ಲ. ಅಲ್ಲಿ ಸೇರಿದ್ದ ವ್ಯಕ್ತಿಗಳನ್ನು ಚಾಸಾ-1 ರವರು ಮನೆಯ ಒಳಗೆ ಕರೆದಿರುವುದಿಲ್ಲ. ನಾನು ನೋಡಿದಾಗ ಸದರಿ ಮನೆಯ ಕೋಣೆಯಲ್ಲಿದ್ದ ಶ್ರೀಗಂಧದ ತುಂಡುಗಳನ್ನು ತೆರೆದಿಟ್ಟಿದ್ದು, ಅದನ್ನು ಯಾವುದೇ ವಸ್ತುವಿನಿಂದ ಮುಚ್ಚಿರಲಿಲ್ಲ. ಮು.ಮಾ-1 ರಿಂದ 10 ವಸ್ತುಗಳನ್ನು ಒಂದು ಬಿಳಿ ಚೀಲದಲ್ಲಿ ಮಂಚದ ಕೆಳಗೆ ಇಡಲಾಗಿತ್ತು. ನಾನು ಹೇಳುತ್ತಿರುವ Gun powder, Gun pellets ಮತ್ತು detonator ಗಳನ್ನು ಗಾಳಿಗೆ ತಾಗದ ರೀತಿಯಲ್ಲಿ ಪ್ರತ್ಯೇಕವಾಗಿ ಒಂದು ಡಬ್ಬದಲ್ಲಿ ಇಟ್ಟಿರಲಿಲ್ಲ ಆದರೆ, ಮು.ಮಾ -1 ಮತ್ತು ಮು.ಮಾ-10 ಗಳನ್ನು ಒಟ್ಟಿಗೇ ಚೀಲದಲ್ಲಿ ಇಡಲಾಗಿತ್ತು. ಸಾಮಾನ್ಯವಾಗಿ Gun powder, Gun pellets ಮತ್ತು detonator ಗಳನ್ನು ಗಾಳಿಗೆ ತಾಗಿಸಿದ್ದಲ್ಲಿ ಅವು ಹಾಳಾಗುವ ಸಾಧ್ಯತೆ ಇರುತ್ತದೆ ಎನ್ನುವ ಮಾಹಿತಿ ನನಗೆ ಇರುವುದಿಲ್ಲ. ನಾನು ಹೇಳುತ್ತಿರುವ ಮು.ಮಾ-1 ಮತ್ತು 10 ವಸ್ತುಗಳನ್ನು ಅಮಾನತು ಪಡಿಸಿಕೊಳ್ಳುವ ಸಮಯದಲ್ಲಿ ಅರಣ್ಯಾಧಿಕಾರಿಗಳು ನನ್ನ ಸಮಕ್ಷಮ ಯಾವುದೇ ಪೋಟೋಗಳನ್ನು ತೆಗೆದಿರುವುದಿಲ್ಲ. ಅದೇ ರೀತಿ ಸದರಿ ವಸ್ತುಗಳು, ಶ್ರೀಗಂಧದ ಮರಗಳನ್ನು ಮತ್ತು ನಮ್ಮನ್ನು ತೋರಿಸುವಂತೆ ಯಾವುದೇ ಪೋಟೋಗಳನ್ನು ಸಹ ತೆಗೆದಿರುವುದಿಲ್ಲ. ನಿಪಿ-1 ಮಹಜರ್ ಅನ್ನು ಅರಣ್ಯಾಧಿಕಾರಿಯಾದ ಚಾಸಾ-3 ರವರು ಬರೆದಿರುತ್ತಾರೆ. ಸದರಿ ನಿಪಿ-1 ಮಹಜರ್ ಒಟ್ಟು 2 ಪುಟಗಳಿಂದ ಕೂಡಿರುತ್ತದೆ. ಸದರಿ ನಿಪಿ-1 ಮಹಜರ್ ನಲ್ಲಿ ನಾನು ಕೇವಲ ಒಂದು ಪುಟದಲ್ಲಿ ಸಹಿ ಮಾಡಿರುತ್ತೇನೆ. ನಿಪಿ-1 ಮಹಜರ್ ಗೆ ಅಲ್ಲಿ ಸೇರಿದ್ದ ವ್ಯಕ್ತಿಗಳನ್ನು ಕರೆದು, ಅವರ ಸಹಿಯನ್ನು ಅರಣ್ಯಾಧಿಕಾರಿಗಳು ಪಡೆದಿರುವುದಿಲ್ಲ. 1 ನೇ ಆರೋಪಿಯ ಮನೆಯಿಂದ ಶೃಂಗೇರಿ ಪೋಲೀಸ್ ಠಾಣೆ ಕೇವಲ 1 ಕಿ.ಮೀ ದೂರದಲ್ಲಿ ಇದೆ ಎಂದರೆ ಸರಿ. ನಾನು ಹೇಳುತ್ತಿರುವ ಮು. ಮಾ-1 ಮತ್ತು ಮು.ಮಾ-10 ವಸ್ತುಗಳನ್ನು ಅಮಾನತು ಪಡಿಸಿಕೊಳ್ಳುವ

ಸಮಯದಲ್ಲಿ ಅರಣ್ಯಾಧಿಕಾರಿಗಳು ಪೋಲೀಸರನ್ನು ಸ್ಥಳಕ್ಕೆ ಕರೆಸಿರುವುದಿಲ್ಲ. ಮು.ಮಾ-1 ಮತ್ತು ಮು.ಮಾ-10 ವಸ್ತುಗಳನ್ನು ನಾನು ಹೇಳುವಂತೆ ಮಹಜರ್ ಮುಖೇನ ಅಮಾನತು ಪಡಿಸಿಕೊಳ್ಳುವ ಸಮಯದಲ್ಲಿಯೂ ಸಹ ನಮ್ಮ ಪೋಟೋಗಳನ್ನು ಸದರಿ ವಸ್ತುಗಳ ಜೊತೆ ತೆಗೆದಿರುವುದಿಲ್ಲ.

6. ನಾನು ಹೇಳುವಂತೆ ದಿನಾಂಕ 29-02-2020 ರಂದು ಚಾಸಾ-1 ರಿಂದ ಚಾಸಾ-4 ರವರು ನನ್ನನ್ನು ಹಾಗೂ ಚಾಸಾ-6 ರಿಂದ ಚಾಸಾ-8 ರವರನ್ನು 1 ನೇ ಆರೋಪಿಯ ಮನೆಗೆ ಕರೆಸಿರುವುದಿಲ್ಲ ಮತ್ತು ಮು.ಮಾ-1 ರಿಂದ ಮು.ಮಾ-10 ವಸ್ತುಗಳನ್ನು ನಮ್ಮ ಸಮಕ್ಷಮ ಅಮಾನತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಮ್ಮ ಸಮಕ್ಷಮ ನಿಪಿ-1 ಮಹಜರ್ ಅನ್ನು ತಯಾರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-7 ರವರ ಜೊತೆ ಸೇರಿ ಅವರಿಗೆ ಇದ್ದ 1 ನೇ ಆರೋಪಿಯ ವಿರುದ್ಧ ದ್ವೇಷಕ್ಕೆ ಸಹಕರಿಸಲು ನಿಪಿ-1 ಮಹಜರ್ ಗೆ ಪೋಲೀಸ್ ಠಾಣೆಯಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಹಾಗಿದ್ದರೂ ನನ್ನ ಸಮಕ್ಷಮ ನಿಪಿ-1 ಮಹಜರ್ ಅನ್ನು ಬರೆದಿರುತ್ತಾರೆ ಮತ್ತು ಮು. ಮಾ -1 ರಿಂದ 10 ವಸ್ತುಗಳನ್ನು ಅಮಾನತು ಪಡಿಸಿಕೊಂಡಿರುತ್ತಾರೆ ಎಂದು ಈಗ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಃಃಮರುವಿಚಾರಣೆ ಇಲ್ಲಃಃ</u>**

(ದಿನಾಂಕಃ29-08-2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-
ಪ್ರ.ದ.ನ್ಯಾ.ದಂಃ ಶೃಂಗೇರಿ